**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ231/2022**

ಅಸಾಃ 1 (ಚಾಸಾ-1)

| | |
|---|---|
| ಹೆಸರು | ಯಲ್ಲವ್ವ ಪಾಟೀಲ |
| ತಂದೆಯ /ಗಂಡನ ಹೆಸರು | ಲಂಕೇಶ |
| ವಯಸ್ಸು | 48 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಮಹಾಲಿಂಗಪೂರ |

ದಿನಾಂಕ 20-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ-2 ರಂದ 6 ಮತ್ತು ಆರೋಪಿತರ ಪರಿಚಯ ಇದೆ. ಸುಮಾರು 08-09 ವರ್ಷಗಳ ಹಿಂದೆ ಆಸ್ತಿ ಸಲುವಾಗಿ ನಮ್ಮ ಮತ್ತು ಆರೋಪಿತರ ನಡುವೆ ಜಗಳವಾಗಿದ್ದು ಆಗ ನಾನು ಮಹಾಲಿಂಗಪೂರ ಪೋಲಿಸ ಠಾಣೆಗೆ ಹೋದಾಗ ಪೋಲಿಸರು ನಮ್ಮ ನಡುವೆ ರಾಜಿ ಸಂದಾನ ಮಾಡಿಸುತ್ತೇವೆ ಎಂದು ಹೇಳಿ, ಒಂದು ಖಾಲಿ ಹಾಳೆಯ ಮೇಲೆ ಸಹಿಯನ್ನು ಪಡೆದಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರ ಮೇಲೆ ಏನು ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಯಾವ ಕಾಲಕ್ಕೂ ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿ, ಹೊಡಿ ಬಡಿ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುವದಿಲ್ಲ. ನಾನು ಕೆಲಸ ಮಾಡುವಾಗ ಬಿದ್ದು ಗಾಯ ಹೊಂದಿ ಚಿಕಿತ್ಸೆ ತೆಗೆದುಕೊಂಡಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪಿರ್ಯಾದಿಯಾಗಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 20-11-2015 ರಂದು ಬೆಳಿಗ್ಗೆ 07-00 ಗಂಟೆ ಸುಮಾರಿಗೆ ಆರೋಪಿತರು ನಮ್ಮ ಮನೆಯ ಕೀಲಿಯನ್ನು ಮುರಿದು ಅತಿಕ್ರಮ ಪ್ರವೇಶ ಮಾಡಿ ನನ್ನ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, 2 ಮತ್ತು 3 ನೇ ಆರೋಪಿತರು ನನ್ನ ಕೂದಲು ಹಿಡಿದು ಜಗ್ಗಾಡಿ ಕೆಳಕ್ಕೆ ಕೆಡವಿದ್ದಾ ಅಲ್ಲದೇ, 1 ನೇ ಆರೋಪಿ ಕೈಯಿಂದ ನನಗೆ ಗುದ್ದಿ, ನನ್ನ ಕೈಗೆ ಕಚ್ಚಿದ್ದೂ ಅಲ್ಲದೇ, 3 ನೇ ಆರೋಪಿ ಕಲ್ಲಿನಿಂದ ನನಗೆ ಜಜ್ಜಿದ್ದು, 4 ಮತ್ತು 5 ನೇ ಅರೋಪಿತರು ಅವಾಚ್ಯ ಶಬ್ದದಿಂದ ಬೈದು ಪ್ರಚೋದನೆ ನೀಡಿದ್ದೂ ಅಲ್ಲದೇ, ಎಲ್ಲರೂ ಕೂಡಿ ನನಗೆ ಜೀವ ಬೆದರಿಕೆ ಹಾಕಿರುತ್ತಾರೆಂದು ಹೇಳಿ ನಿಪಿ-1 ರಂತೆ ನಾನು ಪಿರ್ಯಾದಿ ಸಲ್ಲಿಸಿದ್ದೇನೆಂದು ಸೂಚಿಸುವದು ಸರಿಯಲ್ಲ.

ನನಗೆ ನಿಪಿ- 1 ರಲ್ಲಿರುವ ಎಲ್ಲ ಸಂಗತಿಗಳು ತಿಳಿದಿದ್ದರೂ ಸಹ ಆರೋಪಿತರೊಂದಿಗೆ ರಾಜಿ ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಪಿ ಎಂ ವಿ ವಕೀಲರಿಂದ:- ಇಲ್ಲಾ .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.